ಓ.ಎಸ್.ನಂ.316/2014
ಪಿ.ಡಬ್ಲ್ಯೂ-1

**<u>ಸಾಕ್ಷಿಯನ್ನು ದಿಃ20.09.2023 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ2 ನೇ ಪ್ರತಿವಾದಿ ಪರ ಶ್ರೀ.ಎನ್.ಎ. ವಕೀಲರಿಂದ.</u>**

ನನ್ನ ಅಕ್ಕ, ಅಣ್ಣ ಮತ್ತು ತಾಯಿಯ ವಿರುದ್ದ ಒಟ್ಟು 7 ಆಸ್ತಿಗಳ ಬಗ್ಗೆ ಈ ದಾವೆಯನ್ನು ಹೂಡಿರುತ್ತೇನೆ. 7 ಆಸ್ತಿಗಳಲ್ಲಿ ಆರು ಆಸ್ತಿಗಳು ಪಿತ್ರಾರ್ಜಿತವಾಗಿದ್ದು, ಒಂದು ಆಸ್ತಿಯನ್ನು ನಮ್ಮ ತಾಯಿ ಒಟ್ಟು ಕುಟುಂಬದ ನಾತೆಯಿಂದ ಖರೀದಿ ಮಾಡಿರುತ್ತಾರೆ. ಯಾವ ವರ್ಷದಲ್ಲಿ ಆ ಒಂದು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಮ್ಮ ತಾಯಿ ಖರೀದಿ ಮಾಡಿದ ಆಸ್ತಿಯ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಶಾಲೆಯ ದಾಖಲೆಯ ಪ್ರಕಾರ ನಾನು ದಿಃ01.03.1974 ರಲ್ಲಿ ಜನಿಸಿರುತ್ತೇನೆ. 2 ನೇ ಪ್ರತಿವಾದಿ ನನ್ನ ಅಣ್ಣ ಇರುತ್ತಾರೆ. ನನ್ನ ಅಣ್ಣ 15 ವರ್ಷ ದೊಡ್ಡವರಿರುತ್ತಾರೆ. ನನ್ನ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿದಾಗ ನನ್ನ ಅಕ್ಕಂದಿರ ಮದುವೆ ಆಗಿತ್ತಾ ಎಂದರೆ ಸಾಕ್ಷಿಯು ನನ್ನ ತಾಯಿಯೇ ಎಲ್ಲರ ಮದುವೆಯನ್ನು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಮರಣ ಹೊಂದಿದಾಗ 2 ನೇ ಪ್ರತಿವಾದಿ ಬೆಂಗಳೂರಿನ ಬೇಕರಿಯಲ್ಲಿ ಕೆಲಸಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಓದುತ್ತಿದ್ದರು ಎಂದು ನುಡಿದಿರುತ್ತಾರೆ. ಏನು ಓದುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

2. ನನ್ನ ತಂದೆಯ ಜೀವಿತಕಾಲದಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ನಮಗೆ ಇತ್ತು ಎಂದರೆ ಸಾಕ್ಷಿಯು ಒಟ್ಟು 8 1/2 ಎಕರೆ ಆಸ್ತಿ ಇತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ದಾವೆಯಲ್ಲಿ ನಾನು ಬರೆಸಿಲ್ಲ ಎಂದರೆ ಸರಿ. ಚನ್ನಗಿರಿಯಲ್ಲಿ ಆಸ್ತಿ ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಮುಂದುವರೆದು ಸಾಕ್ಷಿಯು 2 ನೇ ಪ್ರತಿವಾದಿ ಮಾರಾಟ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಚನ್ನಗಿರಿಯಲ್ಲಿರುವ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇರುವ ಬಗ್ಗೆ ನಾನು ಯಾವುದೇ ದಾಖಲಾತಿ ನೋಡಿರುವುದಿಲ್ಲ. ನನ್ನ ತಾಯಿ ಮತ್ತು ಅಕ್ಕಂದಿರ ಹೇಳಿಕೆಯ ಮೇರೆಗೆ ನಾನು ಹೀಗೆ ನುಡಿಯುತ್ತಿದ್ದೇನೆ. 2 ನೇ ಪ್ರತಿವಾದಿ ಯಾವ ಇಸವಿಯಲ್ಲಿ ಚನ್ನಗಿರಿಯಲ್ಲಿರುವ ಆಸ್ತಿಯನ್ನು ಮಾರಾಟಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಈ ಬಗ್ಗೆ ನೊಂದಣಿ ಕಛೇರಿಯಲ್ಲಿ ಕ್ರಯಪತ್ರದ ದಾಖಲೆಗಳು ದೊರೆಯುತ್ತವೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ನನಗೆ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.8 ನ್ನು ಯಾವ ಕಛೇರಿಯಿಂದ ತಂದಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನಾನೇ ಅರ್ಜಿ ಸಲ್ಲಿಸಿ ಈ ದಾಖಲೆಯನ್ನು ಪಡೆದುಕೊಂಡಿರುತ್ತೇನೆ.

3. ಆಸ್ತಿ ವರ್ಗಾವಣೆಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ನೊಂದಣಿ ಕಛೇರಿಯಲ್ಲಿ ನೊಂದಣಿ ಮಾಡಿಸಲಾಗುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯು ಮಾರಾಟ ಮಾಡಿದ್ದಾನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರಾಪಂಚಿಕ ಜ್ಞಾನ ಇದೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.